ಶ್ರೀ ಎಸ್.ಎಂ. ನಾಗರಾಜ್ :— ಮಾನ್ಯ ಅಧ್ಯಕ್ಷರೇ, ಉತ್ತರದಲ್ಲಿ ಹಿಂದೆ ಆಶ್ವಾಸನೆ ಕೊಟ್ಟರೂ ಕೂಡ ಅದನ್ನು ಮಾಡಿಲ್ಲವೆಂದು ಕೇಳಿದ್ದಾರೆ. 'ಹೌದು, ಹಣಕಾಸಿನ ತೊಂದರೆಯಿಂದ ಮಾಡುವುದಕ್ಕೆ ಆಗಿಲ್ಲ'ವೆಂದು ಉತ್ತರ ಕೊಟ್ಟಿದ್ದಾರೆ. ಹಣಕಾಸಿನ ತೊಂದರೆ ಇದ್ದರೆ ಹಿಂದಿನ ವರ್ಷ ಸಹ ಹೇಗೆ ಹಲವಾರು ಸ್ಟೇಷನ್‌ಗಳಿಗೆ ಮಂಜೂರಾತಿ ಕೊಟ್ಟಿದ್ದಾರೆ. ಆದರಿಂದ ದಯವಿಟ್ಟು ಈ ಸಾರಿ ಮಂಜೂರು ಮಾಡಿಕೊಡುತ್ತೇವೆ ಎಂದು ಅವರು ತಮ್ಮ ಮೂಲಕ ಆಶ್ವಾಸನೆ ಕೊಡಲಿ ಎಂದು . ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ :— ಅಧ್ಯಕ್ಷರೇ, ನಮ್ಮ ಸರ್ಕಾರದ ನೀತಿ ಹಣಕಾಸಿನ ಕೊರತೆ ಇದೆ. ಅದರ ಜೊತೆಗೆ ಹೆಚ್ಚಿಗೆ ಪೊಲೀಸ್ ಠಾಣೆಗಳನ್ನು ಮಾಡುವುದರ ಬದಲಾಗಿ ಇರತಕ್ಕಂಥ ಪೊಲೀಸ್ ಸ್ಟೇಷನ್‌ಗಳನ್ನು ಆಧುನೀಕರಣ ಮಾಡತಕ್ಕಂಥಾದ್ದು, ಇನ್ನೂ ಹೆಚ್ಚು ಬಲಯುತವಾಗಿ ಮಾಡತಕ್ಕಂಥಾದ್ದರ ಬಗ್ಗೆ ಪ್ರಾಮುಖ್ಯತೆ ಕೊಡಬೇಕು ಎನ್ನತಕ್ಕಂಥ ಉದ್ದೇಶ ಇರುವುದರಿಂದ ಇದನ್ನು ಪರಿಶೀಲನಾ ಹಂತದಲ್ಲೇ ಇಡುತ್ತೇನೆ ಸ್ವಾಮಿ.

ಸೂರತ್ಕಲ್ ಕ್ಷೇತ್ರಕ್ಕೆ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯಿಂದ ಬಿಡುಗಡೆಯಾದ ಹಣ.

07(348) ಶ್ರೀ ಕುಂಭ್ಳೆ ಸುಂದರರಾವ್ (ಸುರತ್ಕಲ್) :— ಮಾನ್ಯ ಪ್ರದೇಶಾಭಿವೃದ್ಧಿ ಮತ್ತು ಕಾಡಾರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಿಗೆ ಕಳೆದ ನಾಲ್ಕು ವರ್ಷಗಳಲ್ಲಿ ಬಿಡುಗಡೆ ಮಾಡಿದ ಹಣ ಎಷ್ಟು, (ಕಾಮಗಾರಿವಾರು ವಿವರ ಒದಗಿಸುವುದು);

ಆ) ಸೂರತ್ಕಲ್ ಕ್ಷೇತ್ರದಲ್ಲಿ ಯಾವ ಯಾವ ಕಾಮಗಾರಿಗಳಿಗಾಗಿ ಎಷ್ಟೆಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ, ನಿಗದಿತ ಯೋಜನೆಗಳಿಗಾಗಿ ಸೂಚಿತ ಮೊತ್ತವು ಪೂರ್ಣವಾಗಿ ಬಿಡುಗಡೆಯಾಗಿದೆಯೇ, ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು?

ಶ್ರೀ ಕೆ. ವೆಂಕಟೇಶ (ಪ್ರದೇಶಾಭಿವೃದ್ಧಿ ಮತ್ತು ಕಾಡಾ ರಾಜ್ಯ ಸಚಿವರು) :—

ಅ) ಮಂಡಳಿಯು ಕಾಮಗಾರಿವಾರು ಹಣ ಬಿಡುಗಡೆ ಮಾಡುವುದಿಲ್ಲ. ಅನುಷ್ಠಾನಾಧಿಕಾರಿಗಳಿಗೆ ಇಡೀ ಗಂಟಾಗಿ ನೀಡಿದ ಹಣದ ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ.

ಆ) ಮಂಡಳಿಯು ಕಾಮಗಾರಿವಾರು ಹಣ ಬಿಡುಗಡೆ ಮಾಡುವುದಿಲ್ಲ. ಸೂರತ್ಕಲ್ ಕ್ಷೇತ್ರದಲ್ಲಿ ಖರ್ಚಾದ ಹಣದ ವಿವರಗಳನ್ನು ಅನುಬಂಧ-2ರಲ್ಲಿ ನೀಡಲಾಗಿದೆ. ಹಣವನ್ನು ಕಾಮಗಾರಿಯ ಪ್ರಗತಿಯನ್ನು ಆಧಾರಿಸಿ ಬಿಡುಗಡೆ ಮಾಡಲಾಗುವುದು.

ಅನುಬಂಧ - 1

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಿಗೆ ಕಳೆದ ನಾಲ್ಕು ವರ್ಷಗಳಲ್ಲಿ ಬಿಡುಗಡೆಯಾದ ಹಣದ ವಿವರ

ವರ್ಷ	ಸ್ಥಳೀಯ ಲೆಕ್ಕ ಪರಿಶೋಧನ ವರ್ತುಲ ಮಂಗಳೂರು	ಜಿ.ಪಂ.ಇಂ. ವಿಭಾಗ ಮಂಗಳೂರು	ಲೋ.ಇ. ವಿಭಾಗ ಮಂಗಳೂರು	ಕ.ಭೂ.ಸೇ. ನಿಗಮ ಮಂಗಳೂರು	ಕ.ನೀ.ಸ.ಒ.ಚ. ಮಂಡಳಿ ಮಂಗಳೂರು	ನಗರಪಾಲಿಕೆ ಮಂಗಳೂರು	ಜಿ.ಪಂ.ಇಂ. ವಿಭಾಗ ಉಡುಪಿ
				(ರೂ. ಲಕ್ಷಗಳಲ್ಲಿ)			
1994-95	258-00	170.00	34-00	—	—	10-00	170.00
1995-96	395-00	—	—	—	3.15	—	—
1996-97	50-00	184.00	88.00	—	—	—	204.00
1997-98	—	155.00	34-00	7.00	—	—	295.00
1998-99 (31.1.1999ರ ವರೆಗೆ)	10-00	100.00	—	—	—	—	70.00
ಒಟ್ಟು	714-00	619.00	152.00	7.00	3.15	10.00	739.00

(ಅನುಬಂಧ - 2

ಸೂರತ್ಕಲ್ ಕ್ಷೇತ್ರದಲ್ಲಿ ಖರ್ಚು ಮಾಡಿದ ಹಣದ ವಿವರ

ವರ್ಷ	ಮಂಜೂರಾದ ಕಾಮಗಾರಿಗಳ ಸಂಖ್ಯೆ	ಅಂದಾಜು ಮೊತ್ತ	ಅನುದಾನ (ಲಕ್ಷ ರೂಗಳಲ್ಲಿ)	ವೆಚ್ಚ (ಲಕ್ಷ ರೂಗಳಲ್ಲಿ)
1993-94	38	55.14	52.14	10.32
1994-95	23	42.02	42.02	29.32
1995-96	14	16.29	16.29	55.70
1996-97	15	15.98	15.98	33.26
1997-98	23	24.81	24.81	17.89

ಶ್ರೀ ಕುಂಭೆ ಸುಂದರರಾವ್ :— ಮಾನ್ಯ ಅಧ್ಯಕ್ಷರೇ, ಮಲೆನಾಡು ಪ್ರದೇಶಾಭಿವೃದ್ಧಿ ಮಂಡಲಿಯು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಿಗೆ ಕಳೆದ ನಾಲ್ಕು ವರ್ಷಗಳಲ್ಲಿ ಬಿಡುಗಡೆ ಮಾಡಿದ ಹಣ ಮತ್ತು ಕಾಮಗಾರಿಗಳ ವಿವರಗಳನ್ನು ಕೊಡಿ ಎಂದು ಕೇಳಿದರೆ ಕಾಮಗಾರಿವಾರು ಹಣ ಬಿಡುಗಡೆ ಮಾಡುವ ಪದ್ಧತಿ ಇಲ್ಲ. ಅನುಷ್ಠಾನ ಅಧಿಕಾರಿಗಳಿಗೆ ಇಡೀಗಂಟು ಬಿಡುಗಡೆ ಮಾಡುತ್ತೇವೆ ಎಂದು ಹೇಳಿದ್ದಾರೆ. ಎರಡನೇ ಪ್ರಶ್ನೆಯಲ್ಲಿ ನಾನು ಸೂರತ್ಕಲ್ ಕ್ಷೇತ್ರದಲ್ಲಿ ಎಷ್ಟೆಷ್ಟು ಹಣವನ್ನು ಯಾವ್ಯಾವ ಕಾಮಗಾರಿಗಳಿಗೆ ಬಿಡುಗಡೆ ಮಾಡಿದ್ದೀರಿ ಎಂದು ಕೇಳಿದರೆ ಕಾಮಗಾರಿವಾರು ಹಣ ಬಿಡುಗಡೆ ಆಗುವುದಿಲ್ಲ ಎಂದು ಹೇಳಿದ್ದಾರೆ. ಸೂರತ್ಕಲ್ ಕ್ಷೇತ್ರದಲ್ಲಿ ಖರ್ಚಾದ ವಿವರಗಳನ್ನು ಕೊಡಿ ಎಂದು ಕೇಳಿದ್ದಕ್ಕೆ ವಿವರಗಳನ್ನು ಕೊಟ್ಟಿದ್ದಾರೆ. ಕೊನೆಯಲ್ಲಿ ಹಣವನ್ನು ಕಾಮಗಾರಿಯ ಪ್ರಗತಿಯನ್ನು ಆಧರಿಸಿ ಬಿಡುಗಡೆ ಮಾಡಲಾಗುವುದು ಎಂದು ಹೇಳಿದ್ದಾರೆ. ಸೂರತ್ಕಲ್ ಕ್ಷೇತ್ರದಲ್ಲಿ ಖರ್ಚಾದ ವಿವರಗಳನ್ನು ಕೊಡಿ ಎಂದು ಕೇಳಿದ್ದಕ್ಕೆ ವಿವರಗಳನ್ನು ಕೊಟ್ಟಿದ್ದಾರೆ. ಕೊನೆಯಲ್ಲಿ ಹಣವನ್ನು ಕಾಮಗಾರಿಯ ಪ್ರಗತಿಯನ್ನು ಆಧರಿಸಿ ಬಿಡುಗಡೆ ಮಾಡಲಾಗುವುದು ಎಂದು ಹೇಳಿದ್ದಾರೆ. ಒಂದು ಕಡೆ ಬಿಡುಗಡೆ ಮಾಡುವುದಿಲ್ಲ, ಇಂಡಗಂಟಾಗಿ ಕೊಡತ್ತೇವೆ ಎಂದು. ಮತ್ತೊಂದು ಕಡೆ ಹೇಳುತ್ತಾರೆ ಕಾಮಗಾರಿಯ ಪ್ರಗತಿಯನ್ನು ನೋಡಿ ಬಿಡುಗಡೆ ಮಾಡುತ್ತೇವೆ ಎಂದು ಹಾಗಾದರೆ ವಿವರಗಳು ಅವರ ಹತ್ತಿರ ಉಂಟು ಎಂದಾಯಿತು. ಇದ್ದರೆ ನನಗೆ ಏಕೆ ಕೊಡುವುದಿಲ್ಲ? ಇವರ ಹತ್ತಿರ ವಿವರಗಳು ಉಂಟು ಎನ್ನುವುದಕ್ಕೆ ದಾಖಲೆಯಾಗಿ ಒಂದು ಮಾತನ್ನು ಹೇಳುತ್ತೇನೆ. ನಮ್ಮದು ಏನು ಎಂದರೆ ಬದಲಿ ಪ್ರಸ್ತಾವನೆ ಇದ್ದರೆ ಶಿವಮೊಗ್ಗದಲ್ಲಿ ಆಗುವುದಿಲ್ಲ.

ಅದು ಇವರಿಗೇ ಬರಬೇಕು. ಇವರು ಅದನ್ನು ಅನುಮೋದಿಸಬೇಕು. ನಾನು ಈ ಪ್ರಶ್ನೆ ಕೇಳಿದ ಉದ್ದೇಶ ಏನೆಂದರೆ ಈ ನಾಲ್ಕು ವರ್ಷಗಳಲ್ಲಿ ನಮ್ಮ ಕೆಲವು ಕೆಲಸಗಳು ಬಿಟ್ಟುಹೋಗಿವೆ. ಸಂಬಂಧಿಸಿದ ಮೂಲ ದಾಖಲೆ ಇಲ್ಲಿ ಇದ್ದರೆ ಅದರ ಮೇಲಿಂದ ಅಲ್ಲಿ ಅಧಿಕಾರಿಗಳನ್ನು ಕೇಳುವುದಕ್ಕೆ ಅನುಕೂಲವಾಗುತ್ತದೆ ಎಂದು ನಾನು ಕೇಳಿದ್ದೇನೆ. ಆದರೆ ಈ ದ್ವಂದ್ವ ಉತ್ತರ ಬರಬಾರದು. ಸರಿಯಾದ ಉತ್ತರ ಕೊಡಬೇಕೆಂದು ತಮ್ಮ ಮೂಲಕ ನಾನು ವಿನಂತಿಸುತ್ತೇನೆ.

ಶ್ರೀ ಕೆ. ವೆಂಕಟೇಶ್ :— ಸನ್ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಸದಸ್ಯರು ಪ್ರಶ್ನೆ ಕೇಳಿರತಕ್ಕಂಥಾದ್ದು ನೀವು ಇಂಡುವಿಜ್ಯುಯಲ್ ಆಗಿ ಕಾಮಗಾರಿಗಳಿಗೆ ಎಷ್ಟೆಷ್ಟು ಹಣ ಬಿಡುಗಡೆ ಮಾಡಿದ್ದೀರಿ ಎಂದು. ಆದರೆ ವಾಸ್ತವವಾಗಿ ನಾವು ಕಾಮಗಾರಿಗಳಿಗೆ ಹಣ ಬಿಡುಗಡೆ ಮಾಡುವುದಿಲ್ಲ. ಯಾರು ಇಂಪ್ಲಿಮೆಂಟಿಂಗ್ ಎಜೆನ್ಸಿ ಇರುತ್ತಾರೆ, ಅವರು ಎಷ್ಟು ಹಣ ಕೇಳುತ್ತಾರೆ ಅದರ ಮೇಲೆ ಬಿಡುಗಡೆ ಮಾಡಿಕೊಂಡು ಹೋಗುತ್ತೇವೆ. ಕಾಮಗಾರಿಗಳು ಮುಗಿದ ಹಾಗೆ ಅವರಿಗೆ ಎಂದರೆ ಇಂಪ್ಲಿಮೆಂಟಿಂಗ್ ಏಜೆನ್ಸಿಗಳಿಗೆ ಪೇಮೆಂಟ್ ಮಾಡತಕ್ಕಂಥ ಪದ್ಧತಿ ಮೊದಲಿನಿಂದಲೂ ಮಾಡಿಕೊಂಡು ಬಂದಿದ್ದೇವೆ. ಮಾನ್ಯ ಸದಸ್ಯರು ಹಣ ಎಷ್ಟೆಷ್ಟು ಬಿಡುಗಡೆ ಮಾಡಿದ್ದೀರಿ ಎಂದು ಕೇಳಿದ್ದಾರೆ. ಆದರೆ ನಾವು ಹಣವನ್ನು ಇಂಡುವಿಜ್ಯುಯಲ್ ಆಗಿ ಬಿಡುಗಡೆ ಮಾಡುವುದಿಲ್ಲ. ನಾವು ಇಡಿಗಂಟಾಗಿ ಹಣ ಬಿಡುಗಡೆ ಮಾಡುತ್ತೇವೆ ಆದ್ಯತೆ ಮೇಲೆ ಕಾಮಗಾರಿಗಳ ಬಿಲ್‌ಗಳು ಬಂದಹಾಗೆ ಅವರು ಪಾವತಿ ಮಾಡುತ್ತೇವೆ ಎಂದು ನಾನು ಉತ್ತರ ಕೊಟ್ಟಿದ್ದೇನೆ.

ಶ್ರೀ ಕುಂಭಿ ಸುಂದರರಾವ್ :— ಅಧ್ಯಕ್ಷರೇ, ನನಗೆ ಆಶ್ಚರ್ಯವಾಗುತ್ತಿದೆ. ಯಾವ್ಯಾವ ಕಾಮಗಾರಿಗಳನ್ನು ನಾನು ಸೂಚಿಸುತ್ತೇವೆ ಅದಕ್ಕೆ ಅವರು ಹಣ ಬಿಡುಗಡೆ ಮಾಡುವಂಥಾದ್ದು. ಅಂದಮೇಲೆ ಪಟ್ಟಿ ಅವರ ಹತ್ತಿರ ಇದೆಯೆಂದು ಆಯಿತು. ಅದನ್ನು ಶಾಸಕರಿಗೆ ಒದಗಿಸುವುದು ಅವರ ಕರ್ತವ್ಯ ಆಗುತ್ತದೆ.

ಅಧ್ಯಕ್ಷರು :— ತಾವು ತಮ್ಮ ಪ್ರಶ್ನೆಯನ್ನು ಗಮನಿಸಿ ಮತ್ತು ಅವರು ಕೊಟ್ಟಿರತಕ್ಕಂಥ ಉತ್ತರ ನೋಡಿ. ನನ್ನ ಮನಸ್ಸಿಗೆ ಉತ್ತರ ಸಮಂಜಸವಾಗಿದೆ ಎಂದು ಅನ್ನಿಸಿದೆ. ನಿಮ್ಮ ಪ್ರಶ್ನೆಯನ್ನು ನೋಡಿ. "ಮಲೆನಾಡು ಪ್ರದೇಶಾವೃದ್ಧಿ ಮಂಡಳಿಯು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಿಗೆ ಕಳೆದ ನಾಲ್ಕು ವರ್ಷಗಳಲ್ಲಿ ಬಿಡುಗಡೆ ಮಾಡಿದ ಹಣ ಎಷ್ಟು (ಕಾಮಗಾರಿವಾರು ವಿವರ ಒದಗಿಸುವುದು) ಎಂದು ಇದೆ. ಅದಕ್ಕೆ ಅವರು ಹೇಳುತ್ತಾರೆ" ಮಂಡಳಿಯು ಕಾಮಗಾರಿವಾರು ಹಣ ಬಿಡುಗಡೆ ಮಾಡುವುದಿಲ್ಲ. ವರ್ಕವೈಸ್ ನಾವು ಮಾಡುವುದಿಲ್ಲ. ಅನುಷ್ಠಾನಾಧಿಕಾರಿಗಳಿಗೆ ಎಷ್ಟೆಷ್ಟು ಹಣ ಎಂದು ಲಂಬ್ ಸಮ್‌ನಲ್ಲಿ ಕೊಡುತ್ತೇವೆ ಎಂದು ಹೇಳಿದ್ದಾರೆ. The reply is satisfactory. ನೀವು ಉಪಪ್ರಶ್ನೆ ಏನಾದರೂ ಕೇಳಿ.

ಶ್ರೀ ಕುಂಬೈ ಸುಂದರರಾವ್ :— ನನ್ನ ಎರಡನೇ ಪ್ರಶ್ನೆಯಲ್ಲಿ....

ಅಧ್ಯಕ್ಷರು :— ನೀವು ಕೇಳಿರುವ ಪ್ರಶ್ನೆಗೆ ಅವರು ಕೊಟ್ಟಿರುವ ಉತ್ತರ ಸಮಾಧಾನಕರವಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ :— ಇಲ್ಲಿ ಸಮಸ್ಯೆ ಏನಾಗಿದೆ ಎಂದರೆ, ಇವರು ಮಲೆನಾಡು ಅಭಿವೃದ್ಧಿ ಮಂಡಳಿಗೆ ಕೊಡುತ್ತಾರೆ. ಅವರು ಬೇರೆಬೇರೆ ಕ್ಷೇತ್ರಗಳಿಗೆ ಕೊಡುತ್ತಾರೆ. ಒಟ್ಟು 73 ವಿಧಾನ ಸಭಾ ಕ್ಷೇತ್ರಗಳು ಸೇರುತ್ತವೆ. ಹಿಂದೆ ನಾವು ಮುಖ್ಯಮಂತ್ರಿಗಳ ಜೊತೆಯಲ್ಲಿ ಚರ್ಚಿಸುವಾಗಲೂ ಕೂಡ ಹೇಳಿದ್ದೇವೆ. ಇದಕ್ಕೆ 50 ಕೋಟಿ ರೂಪಾಯಿಗಳ ಅನುದಾನ ಕೊಡಿ ಎಂದು ಹೇಳಿದ್ದೇವೆ. ಈ ವರ್ಷಕ್ಕೆ ಅಂದರೆ 1998-99ನೇ ಸಾಲಿಗೆ ಮೂವತ್ತೆಂಟುವರೆ ಕೋಟಿ ರೂಪಾಯಿಗಳ ಅನುದಾನದಲ್ಲಿ ಇದುವರೆಗೂ ಬಿಡುಗಡೆ ಮಾಡಿರುವುದು ಕೇವಲ ಹನ್ನೆರಡುವರೆ ಕೋಟಿ ರೂಪಾಯಿಗಳು ಮಾತ್ರ. ಜೂನ್ ನಂತರ ಒಂದು ಪೈಸೆ ಕೊಟ್ಟಿಲ್ಲ. ಎಲ್ಲಾ ಕಡೆ ಕೆಲಸಗಳು ಮಂಜೂರಾಗಿವೆ. ಶಂಕುಸ್ಥಾಪನೆ ಮಾಡಿ, ಉದ್ಘಾಟನೆಯಾಗಿ ಕೆಲಸ ಪ್ರಾರಂಭವಾಗಿವೆ. ಈ ರೀತಿ ಇರುವಾಗ ನಾವು ಜನರಿಗೆ ಏನು ಉತ್ತರ ಕೊಡಬೇಕು? ಜನ ರಸ್ತೆಯಲ್ಲಿ ಓಡಾಡುವುದಕ್ಕೆ ಬಿಡುತ್ತಾ ಇಲ್ಲ. ಅದಕ್ಕಾಗಿ ನಾನು ಮಂತ್ರಿಗಳಿಗೆ ಕೇಳುತ್ತೇನೆ. ಇವತ್ತಿನವರೆಗೆ, ಉಳಿದಂಥ ಹಣವನ್ನು ಬಿಡುಗಡೆ ಮಾಡಿರುವುದಿಲ್ಲ. ನಾವು ಈಗಾಗಲೇ ಮಾರ್ಚ್ ಕೊನೆಗೆ ಬರುತ್ತಾ ಇದ್ದೇವೆ. ಇವತ್ತು ಅಥವಾ ನಾಳೆಗೆ ಹಣ ಬಿಡುಗಡೆ ಮಾಡಿಸಿಕೊಡುತ್ತೀರಾ. ಮಾನ್ಯ ಮುಖ್ಯಮಂತ್ರಿಗಳೂ ಇಲ್ಲಿದ್ದಾರೆ, ಇದರ ಬಗ್ಗೆ ಸ್ಪಷ್ಟವಾಗಿ ಹೇಳಲಿ. ಇಲ್ಲದೇ ಹೋದರೆ, ಈ ಮಲೆನಾಡು ಅಭಿವೃದ್ಧಿ ಮಂಡಳಿಯನ್ನು ಮುಚ್ಚಿಬಿಡಿ.

ಶ್ರೀ ಕೆ.ಎಸ್. ಈಶ್ವರಪ್ಪ :— ಮಲೆನಾಡು ಅಭಿವೃದ್ಧಿ ಮಂಡಳಿಯಲ್ಲಿ ಪ್ರತಿ ವರ್ಷವೂ ಕೂಡ ಇದೇ ರೀತಿಯಾಗುತ್ತಿದೆ. ನಾವು ಕಾಮಗಾರಿಗಳನ್ನು ಕೊಡುತ್ತೇವೆ. ಕಾಮಗಾರಿಗಳನ್ನು ಕೊಟ್ಟನಂತರ, ಇವರು ಹಣ ಕಳುಹಿಸುವುದಿಲ್ಲ. ಹಿಂದಿನ ಬಾಕಿ ಇದೆಯೆಂದು ಕಂಟ್ರಾಕ್ಟರುಗಳು ಕೆಲಸ ಮಾಡುವುದಿಲ್ಲ. ನಮ್ಮ ಅಧ್ಯಕ್ಷರು ಹೇಳಿದಪ್ರಕಾರ, ಮೂವತ್ತೆಂಟೂವರೆ ಕೋಟಿಯಲ್ಲಿ ಜೂನ್ ನಲ್ಲಿ ಆರುಕಾಲು ಕೋಟಿ ಬಂದಿದೆ, ಅಕ್ಟೋಬರ್ ನಲ್ಲಿ ಆರುಕಾಲು ಕೋಟಿ ಬಂದಿದೆ ಒಟ್ಟು ಹನ್ನೆರಡುವರೆ ಕೋಟಿ ಹೋದರೆ, ಇನ್ನು ಇಪ್ಪತ್ತಾರು ಕೋಟಿ ರೂಪಾಯಿಗಳು ಇವತ್ತಿನವರೆಗೂ ಬಂದಿಲ್ಲ. ಈ ವರ್ಷದ ಕೆಲಸಗಳನ್ನು ನಾವು ಮತ್ತೆ ಕೊಟ್ಟಿದ್ದೇವೆ. ಯಾವ ಕಂಟ್ರಾಕ್ಟರುಗಳೂ ಮುಂದೆ ಬರುತ್ತಾ ಇಲ್ಲ. ಇಪ್ಪತ್ತಾರು ಕೋಟಿ ಬಾಕಿ ಇದೆ, ಸರ್ಕಾರದಿಂದ ದುಡ್ಡು ಬರಲಿಲ್ಲವೆಂದು ಹೇಳಿದರೆ ನಾವು ಹೇಗೆ ಕೆಲಸ ಮಾಡೋಣವೆಂದು ಹೇಳುತ್ತಾರೆ. ಈಗ ಎಲ್ಲಾ ಕೆಲಸಗಳೂ ನಿಂತುಹೋಗಿವೆ. ಏನಾಗಿದೆ ಎಂದರೆ, ಬರೀ ಗುದ್ದಲಿಪೂಜೆ

ಮಾಡಿ, ಫೋಟೋ ತೆಗೆಸಿಕೊಂಡು ಬಂದಿರುವುದಷ್ಟೇ ಕೆಲಸ ಆಗಿರುವುದು. ಹೀಗಾಗಿ ಯಾವ ಕೆಲಸಗಳೂ ಆಗುತ್ತಾ ಇಲ್ಲ ಆದ್ದರಿಂದ, ಅವರು ಸ್ಪಷ್ಟವಾಗಿ ಹೇಳಲಿ. ಈ ಇಪ್ಪತ್ತಾರು ಕೋಟಿ ರೂಪಾಯಿಗಳನ್ನು ಇವತ್ತು ಅಥವಾ ನಾಳೆ ಬಿಡುಗಡೆ ಮಾಡುತ್ತೀರೋ ಇಲ್ಲವೋ.

ಅಧ್ಯಕ್ಷರು :— ಮಾನ್ಯ ಈಶ್ವರಪ್ಪನವರೇ, ಉದ್ಘಾಟನೆ ಸಂದರ್ಭದಲ್ಲಿ ಕತ್ತರಿ ಕೊಡುತ್ತಾರಲ್ಲಾ ಅದಕ್ಕಿಂತ ಎಷ್ಟೋ ಪುಣ್ಯ ಈ ಗುದ್ದಲಿ ಕೊಡುವುದು.

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) :— ಹಿಂದಿನಸಾರಿ ಮಾನ್ಯ ಏರ್ಗೆಯವರ ಪ್ರಶ್ನೆಗೆ ಉತ್ತರ ಕೊಡುತ್ತಾ ಒಂದು ಸಲಹೆ ಕೊಟ್ಟಿದ್ದೆ. ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ, ಮಲೆನಾಡು ಅಭಿವೃದ್ಧಿ ಮಂಡಳಿ, ಬಯಲುಸೀಮೆ ಅಭಿವೃದ್ಧಿ ಮಂಡಳಿ ಹೀಗೆ ನಾವು ಮಂಡಳಿಗಳ ಸಂಖ್ಯೆಯನ್ನು ಜಾಸ್ತಿ ಮಾಡಿ, ಏರ್ಪು ಕಡಿಮೆಯಾಗಿದೆ. ಅದಕ್ಕೋಸ್ಕರ, ಸಾಮಾನ್ಯವಾಗಿ ಶಾಸಕರು ಏನು ಕೇಳುತ್ತಾರೆ. ಕೊನೇಪಕ್ಷ ನಮ್ಮ ಕ್ಷೇತ್ರಗಳಿಗೆ ಅಭಿವೃದ್ಧಿ ಕೆಲಸಗಳಿಗಾಗಿ ಇಷ್ಟು ಹಣ ಎಂದು ನೀವು ಕೊಡಿ ನಾವು ಯಾವುದಕ್ಕೆ ಪ್ರಿಯಾರಿಟಿ ಕೊಡಬೇಕೋ, ಅದನ್ನು ಕೊಡತ್ತೇವೆ. ಸ್ಕೂಲು ಕಟ್ಟಡ ಕಟ್ಟಿಸಬೇಕೋ, ಆಸ್ಪತ್ರೆ ಕಟ್ಟಿಸಬೇಕೋ ಕಟ್ಟಿಸುತ್ತೇವೆಂದು ಹೇಳುತ್ತಾರೆ. ಇಲ್ಲಿ ಹೈದರಾಬಾದ್ ಅಭಿವೃದ್ಧಿ ಮಂಡಳಿಯಲ್ಲಿ ಹಣ ಸ್ವಲ್ಪ ಜಾಸ್ತಿ ಇತ್ತು, ಅದು ಕಡಿಮೆಯಾಗಿದೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಮಾನ್ಯ ಅಧ್ಯಕ್ಷರೇ, ಇದಕ್ಕೆ ನಾವು ಏನಾದರೊಂದು ಕಂಡು ಹಿಡಿಯಬೇಕು. ಇಷ್ಟೊಂದು ಮಂಡಳಿಗಳನ್ನು ಮಾಡಿಕೊಂಡು, ಅದರೊಳಗೆ ಜಿಲ್ಲಾ ಪಂಚಾಯ್ತಿಗಳ ಮೂಲಕ, ತಾಲ್ಲೂಕು ಪಂಚಾಯ್ತಿಗಳ ಮೂಲಕ ಇಂಪ್ಲಿಮೆಂಟಿಂಗ್ ಏಜೆನ್ಸಿಸೇ ಈ ಹಣಕ್ಕಿಂತ ಜಾಸ್ತಿಯಾಗಿರುತ್ತವೆ. ಅದಕ್ಕಾಗಿ ವಿರೋಧಪಕ್ಷಗಳ ನಾಯಕರಾಗಲೀ, ತಾವಾಗಲೀ ಇದಕ್ಕೆ ಏನಾದರೊಂದು ಮಾಡಬೇಕು. ಇದಕ್ಕೇ ಎಕ್ಸ್‌ಕ್ಲೂಸಿವ್ಲಿ ಆಲ್ ಪ್ಲೋರ್ ಲೀಡರ್ಸ್ ಮೀಟಿಂಗ್ ಕರೆಯೋಣ. ಸಚಿವರು ಏನು ಮಾಡುತ್ತಾರೆ, ಇರುವಷ್ಟು ಹಣ ಪ್ರಿಯಾರಿಟಿ ಮೇಲೆ ಕೊಡುತ್ತಾರೆ. ಆದರೆ, ಹಣ ಇಲ್ಲ, ಅದು ನಮಗೆ ಗೊತ್ತಾಗಿದೆ.

ಶ್ರೀ ಬಿ.ಎನ್. ಯಡಿಯೂರಪ್ಪ :— ತಾವು ಮೂವತ್ತೆಂಟೂವರೆ ಕೋಟಿ ಇಟ್ಟಿದ್ದೀರಿ. ಅದರಲ್ಲಿ ಇದುವರೆಗೂ ಬಿಡುಗಡೆ ಮಾಡಿರುವುದು ಹನ್ನೆರಡೂವರೆ ಕೋಟಿ ಮಾತ್ರ. ಉಳಿದ ಹಣವನ್ನು ಈಗ ಕೊಟ್ಟುಬಿಡಿ. ಮುಂದಿನ ವರ್ಷದಿಂದ ಒಂದೊಂದು ಕ್ಷೇತ್ರಕ್ಕೆ ಒಂದೊಂದು ಕೋಟಿ ರೂಪಾಯಿಗಳನ್ನು ಕೊಡಿ. ಈ ವಿಷಯವಾಗಿ ನಾವು ಹಿಂದೆ ಚರ್ಚೆ ಮಾಡಿದ್ದೇವೆ. ನಾವು ಕೊಡುತ್ತೇವೆಂದು ಹೇಳಿ, ಅದನ್ನು ಒಪ್ಪಿಕೊಳ್ಳುವುದಕ್ಕೆ ಸಿದ್ಧವಿದ್ದೇವೆ.

ಶ್ರೀ ಮಲ್ಲಿಕಾರ್ಜುನ ಏರ್ಗೆ :— ಒಪ್ಪಿಕೊಳ್ಳೋಣ, ಏಕೆಂದರೆ ಎಲ್ಲಾ ಕಡೆಯೂ ಅಭಿವೃದ್ಧಿಯಾಗಬೇಕು. ಅದರಲ್ಲಿ ಯಾರದ್ದೂ ಭಿನ್ನಾಭಿಪ್ರಾಯವಿಲ್ಲ. ಆದರೆ, ವಿಶೇಷವಾದಂಥ ಅಭಿವೃದ್ಧಿ ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ಹೇಳಿ, ಹೈದರಾಬಾದ್ ಕರ್ನಾಟಕಕ್ಕೆ

ಒಂದು ಡಿವಿಜನಲ್ ಕಮೀಷನರ್ ರ್ಯಾಂಕಿನ ಸೆಕ್ರಟರಿಯನ್ನು ನೇಮಿಸಿ, ಧರ್ಮಸಿಂಗ್ ರವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ಮಾಡಿ, ಅವರು ದೇಶದಲ್ಲೆಲ್ಲಾ ಸುತ್ತಾಡಿ ಒಂದು ವರದಿಯನ್ನು ತಯಾರು ಮಾಡಿಕೊಟ್ಟರು.

ಬೇರೆಯವರ ಕಾಂಪೀಟೀಷನ್‌ನಲ್ಲಿ ಒಂದಕ್ಕೊಂದು ಅವರಿಗೆ ಕೊಟ್ಟಿರಿ, ನಮಗೇಕೆ ಕೊಡಲಿಲ್ಲ. ನಮಗೆ ಕೊಟ್ಟಿರಿ, ಅವರಿಗೇಕೆ ಇಲ್ಲ ಎಂಬುದಾಗಿ ಒಂದರ ಮೇಲೆ ಒಂದು ಬಂದವು. ಆ ಮಾತು ಬೇರೆ. ಆದರೆ, ಪ್ರಾದೇಶಿಕ ಅಸಮಾನತೆಯನ್ನು ತೆಗೆದುಹಾಕಬೇಕೆನ್ನತಕ್ಕ ದೃಷ್ಟಿಯಿಂದ ಒಂದು ಸಮಿತಿಯನ್ನು ರಚನೆ ಮಾಡಿ, ಅದರದೇ ಆದಂಥ ಒಂದು ರಿಪೋರ್ಟ್, ಆ ರಿಪೋರ್ಟ್ ಆಧಾರದ ಮೇಲೆ, ಹಣ ಯಾವ ರೀತಿಯಾಗಿ ಬಿಡುಗಡೆ ಮಾಡಬೇಕು. ಎನ್ನತಕ್ಕ ನಿರ್ಣಯವನ್ನು ಸರ್ಕಾರ ತೆಗೆದುಕೊಂಡಿತು. ಈಗ ಅದರ ಪ್ರಕಾರವಾದರೂ ತಾವು ಹಣ ಬಿಡುಗಡೆ ಮಾಡಬೇಕಲ್ಲಾ. ಹಿಂದಿನಬಾರಿ ಚರ್ಚೆ ಮಾಡಿದಾಗ ಮಾನ್ಯ ಪ್ರಕಾಶ್‌ರವರೂ ಇದ್ದರು. ತಾವು ಪ್ರತಿ ವರ್ಷ ಹೆಚ್ಚಿಗೆ ಹಣ ಕೊಡುವುದು ಬಿಟ್ಟು ಕಡಿಮೆ ಮಾಡುತ್ತಿದ್ದೀರಿ. ಶ್ರೀಮಾನ್ ಮೊಯ್ಲಿಯವರ ಕಾಲದಲ್ಲಿ 65 ಕೋಟಿ ರೂ. ಕೊಟ್ಟರು, ಅದರ ಹಿಂದೆಯೂ ಬಂಗಾರಪ್ಪನವರು ಇದ್ದಾಗ 60 ಕೋಟಿ ರೂ, ಕೊಟ್ಟರು. ಹೀಗೆ ಪ್ರತಿ ವರ್ಷ 5 ಕೋಟಿ, 10 ಕೋಟಿ ಹೆಚ್ಚಿಗೆ ಕೊಟ್ಟು ಆ ವರದಿಯ ಆಧಾರದ ಮೇಲೆ ಆ ಪ್ರಾದೇಶಿಕ ಅಸಮಾನತೆಯನ್ನು ಕಡಿಮೆ ಮಾಡಬೇಕು ಎಂದು ಕೊಡುತ್ತಾ ಬಂದರು. ಆದರೆ, ಈಗೇನಾಗಿದೆ ಎಂದರೆ, ನೀವು ನೂರು ಕೋಟಿ ಕೊಡುವುದು ಒಂದು ಕಡೆ ಹೋಯಿತು. ಆ ಅರವತ್ತೆದು ಕೋಟಿಯಲ್ಲಿ ಈ ವರ್ಷ ನೀವು ಕೊಟ್ಟಿದ್ದು 22 ಕೋಟಿ. ಹೀಗೆ ಅನ್ಯಾಯ ಮಾಡಿದರೆ, ಇದನ್ನು ಹೇಗೆ ಸರಿಪಡಿಸುತ್ತೀರಿ?

ಶ್ರೀ ಜೆ.ಹೆಚ್. ಪಟೇಲ್ :— ಫ್ಲೋರ್ ಲೀಡರ್ಸ್ ಮೀಟಿಂಗ್ ಕರೆದು ಈ ಮಂಡಳಿಗಳು ಮತ್ತು ಅವುಗಳ ಸ್ಥಿತಿಗತಿಗಳು, ಹಣಕಾಸಿನ ಸ್ಥಿತಿಗತಿಗಳು ಈ ವಿಚಾರದಲ್ಲಿ ಏನು ಮಾಡಬೇಕೆಂಬುದಕ್ಕೆ ಹಿರಿಯ ಸದಸ್ಯರುಗಳು ಸಲಹೆ ಕೊಟ್ಟರೆ ಒಳ್ಳೆಯದು. ಮಾನ್ಯ ಯಡಿಯೂರಪ್ಪ ನವರು ಈ ಮಂಡಳಿಗಳನ್ನು ಬೇಕಾದರೆ ಮುಚ್ಚಿಬಿಡಿ ಎಂದು ಸಿಟ್ಟಿನಲ್ಲಿ ಹೇಳಿದರು. ನಾನು ಅವರ ಮಾತನ್ನು ಭಾಗಶಃ ಒಪ್ಪುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :— ಇಲ್ಲ, ಇಲ್ಲ. ನೀವಿಬ್ಬರೂ ಅಗ್ರಿ ಆಗಿ, ಇವುಗಳನ್ನು ಮುಚ್ಚಿ ಹಾಕಬೇಕೆಂದಬುದಲ್ಲ. ಇವುಗಳ ಬಗ್ಗೆ ಕಮಿಟಿ ರಚನೆ ಮಾಡಿದ್ದು ಏಕೆ?

ಶ್ರೀ ಜೆ.ಹೆಚ್. ಪಟೇಲ್ :— ತಾವು ಅನುಮತಿ ಕೊಟ್ಟರೆ, ಅವರನ್ನೆಲ್ಲಾ ಕರೆದು ಚರ್ಚೆ ಮಾಡೋಣ. Let us try to find a solution.

ಕೆ.ಎಸ್. ಈಶ್ವರಪ್ಪ :— ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಕೊಟ್ಟ ಸಲಹೆ ಬಗ್ಗೆ ನನ್ನದೇನೂ ಅಭ್ಯಂತರವಿಲ್ಲ. ಫ್ಲೋರ್ ಲೀಡರ್ಸ್ ಸಭೆ ಕರೆಯಲಿ, ಚರ್ಚೆ ಮಾಡೋಣ. ಈಗ ಕೆಲಸ ಆಗಿ ಹೋಗಿರುವುದು, ಇವರು

ಪ್ಲಾನ್‌ನಲ್ಲಿ ಇಟ್ಟ ದುಡ್ಡು, 26 ಕೋಟಿ ಇದುವರೆಗೂ ಬಿಡುಗಡೆ ಮಾಡಿಲ್ಲ, ಇದನ್ನು ಯಾವಾಗ ಬಿಡುಗಡೆ ಮಾಡುತ್ತೀರಿ? ಇದನ್ನು ಸ್ಪಷ್ಟವಾಗಿ ಹೇಳಿ. ಮುಂದೆ ಏನು ಮಾಡಬೇಕೆಂಬ ಬಗ್ಗೆ ಆಮೇಲೆ ಯೋಚನೆ ಮಾಡೋಣ. ಇವತ್ತು ಅಥವಾ ನಾಳೆ ಕೊಡುತ್ತೀರಾ?

ಶ್ರೀ ಎಂ. ವೀರಪ್ಪ ಮೊಯ್ಲಿ:— ಮಾನ್ಯ ಅಧ್ಯಕ್ಷರೇ, ಇಲ್ಲಿ ಎರಡು ಪ್ರಶ್ನೆಗಳು ಉದ್ಭವವಾಗಿದೆ. ಬಹಳ. ಸೂಕ್ಷ್ಮವಾಗಿ ಹೇಳುತ್ತೇನೆ. ಮಾನ್ಯ ಕುಂಬ್ಳೆ ಸುಂದರರಾಯರು ಮತ್ತು ಮಾನ್ಯ ಈಶ್ವರಪ್ಪನವರು ಹೇಳಿದ ಪ್ರಕಾರ, ದಯಮಾಡಿ ಮಲೆನಾಡು ಅಭಿವೃದ್ಧಿ ಮಂಡಳಿ ಬಗ್ಗೆ ತಕ್ಷಣ ತಾವು ರಿವ್ಯೂ ಮಾಡಬೇಕು. ಏಕೆಂದರೆ, ಈ ವರ್ಷ ಮಾತ್ರವಲ್ಲ ಹಿಂದಿನ ವರ್ಷ ಕೂಡ ಒಂದು ಕಾಮಗಾರಿ ಅನುಷ್ಠಾನವಾಗಿರುವುದಿಲ್ಲ. ಒಂದು ನಯಾಪೈಸೆ ಕೂಡ ಖರ್ಚಾಗಿಲ್ಲ. ನಾನು ನಮ್ಮ ಕ್ಷೇತ್ರದ ಕೆಲಸಗಳನ್ನು ರಿವ್ಯೂ ಮಾಡಿದ್ದೇನೆ. ನಮ್ಮ ಪಕ್ಕದ ಕ್ಷೇತ್ರವನ್ನೂ ರಿವ್ಯೂ ಮಾಡಿದ್ದೇನೆ. ಹೊಸದಾಗಿ ಆನ್‌ಗೋಯಿಂಗ್ ವರ್ಕ್ಸ್ ಕೆಲವು ಆಗುತ್ತಾ ಇದೆ. ಅದಕ್ಕೂ ಕೂಡ ಜೂನ್ ನಿಂದ ಹಣ ಬಿಡುಗಡೆ ಮಾಡಿಲ್ಲ. ಹೊಸದಾಗಿ ಏನು ಕಾಮಗಾರಿ ಸೇರಿಸಿದ್ದೇವೆ, ಅವುಗಳಲ್ಲಿ ಒಂದೂ ಕೂಡ ಇಂಪ್ಲಿಮೆಂಟ್ ಆಗಿಲ್ಲ. ಟೆಕ್ನಿಕಲ್ ಅಪ್ರೂವಲ್ ಮತ್ತೊಂದು ಎಲ್ಲಾ ಆದರೂ ಕೂಡ ಒಂದು ಪ್ರೋಗ್ರಾಂ ಕೂಡ ಕಾರ್ಯರೂಪದಲ್ಲಿ ಬಂದಿಲ್ಲ. ಎರಡನೆಯದು ಬಹಳ ಪ್ರಾಮುಖ್ಯವಾದ ವಿಚಾರ. ಏಕೆಂದರೆ, ಒಂದು ವಿಚಾರವನ್ನು ಬಹಳ ಸ್ಪಷ್ಟವಾಗಿ ಹೇಳುತ್ತೇನೆ. ಇದೆಲ್ಲಾ ಒಂದು ಸೈದ್ಧಾಂತಿಕವಾಗಿ ಪ್ರಾರಂಭವಾದಂಥ, ಪ್ರಾದೇಶಿಕ ಅಸಮತೋಲನವನ್ನು ನಿರ್ಮೂಲನೆ ಮಾಡುವುದಕ್ಕೆ ಯಾವ ರೀತಿಯಲ್ಲಿ ಮಾಡಬಹುದು ಎಂಬುದು ಇದು ವಿಧಾನ ಸಭೆಗೆ ಮತ್ತು ಇಲ್ಲಿನ ಸದಸ್ಯರಿಗೆ ಪರಮಾಧಿಕಾರ ಇದೆ. ನಾನು ಇಲ್ಲವೆಂದು ಹೇಳುವುದಿಲ್ಲ. ಆದರೆ, ಇದಕ್ಕೆ ಸಜ್ಜನಿಕೆ ಬೇಕಾಗುತ್ತದೆ. ಏಕೆಂದರೆ, ಇದರಲ್ಲಿ ಕೆಲವು ಬೇರೆ ಬೇರೆ ಆಯಾಮಗಳು ಇವೆ. ಆದ್ದರಿಂದ ಇದರ ಬಗ್ಗೆ ತಜ್ಞರು ವರದಿ ಮಾಡಿ, ವಿಚಾರ ಮಾಡಿ ಇಂತಹ ಮಂಡಳಿಗಳು ಅಗತ್ಯವಿದೆಯೇ ಎಂಬುದನ್ನು ಮಾಡಿದ ಮೇಲೆ, ನಾವು ಚರ್ಚೆ ಮಾಡಬೇಕೇ ಹೊರತು, ಇದರ ಬಗ್ಗೆ ಮೇಲಿನ ನೋಟಕ್ಕೆ ಪರಿಹರಿಸಿ, ಬಗೆಹರಿಸಬೇಕಾದ ಪ್ರಶ್ನೆ ಅಲ್ಲ. ಇನ್ನೊಂದು ವಿಚಾರ, ಮಡಿಕೇರಿಗೆ ಹಿಲ್ ಡೆವಲಪ್‌ಮೆಂಟ್ ಪ್ರೋಗ್ರಾಂ ಎಂದು ಹೇಳಿ, ಒಂದು ಕಾರ್ಯಕ್ರಮ ಮಾಡಿ, ಆ ವರ್ಷ 5 ಕೋಟಿ ರೂ. ಕೊಟ್ಟಿದ್ದೆವು. ಅಲ್ಲಿ ಕೊಡಗನ್ನು ಪ್ರತ್ಯೇಕ ಮಾಡಬೇಕೆಂಬ ದೊಡ್ಡ ಬೇಡಿಕೆ ಇತ್ತು. I could manage it for three years. ಆಮೇಲೆ ಇದನ್ನು ಸ್ಟಾಪ್ ಮಾಡಿದೆವು. ಅಲ್ಲಿ ಮೂಲಭೂತವಾದಂಥ ಕೆಲವು ಸಮಸ್ಯೆಗಳು ಇವೆ. ಇದು ಬಹಳ ಪ್ರಾಮುಖ್ಯ. ಉದಾಹರಣೆಗೆ ಈಗ ಬಾರ್ಡರ್ ಏರಿಯಾ ಡೆವಲಪ್ ಮೆಂಟ್ ಪ್ರೋಗ್ರಾಂ ಮಾಡಿದ್ದೇವೆ. ಆಗ ಆಂಧ್ರದಿಂದ ನಕ್ಸಲೈಟ್ ಹಾವಳಿ ಬರುತ್ತಾ ಇತ್ತು ಹಿಂದೂಪುರದಿಂದ ಆ ಕಡೆ ಪಾವಗಡಕ್ಕೆ. By spending Rs. one crore in places like Chincholi, Raichur, Pavagada, we could prevent the naxalites from entering these places. ಆದ್ದರಿಂದ ಮೂಲಭೂತವಾದಂಥ ಕೆಲವು ಸಿದ್ಧಾಂತಗಳು ಇವೆ. ಅದರ ಬಗ್ಗೆ ತಾವು

ತಜ್ಞರಿಂದ ಅಧ್ಯಯನ ಮಾಡಿಸಿ, ಆಮೇಲೆ ಶಾಸಕರ ಜೊತೆಯಲ್ಲಿ ಚರ್ಚೆ ಮಾಡಬೇಕು. ಇದು ಅಷ್ಟೊಂದು ಹಗುರವಾದ ವಿಚಾರವಲ್ಲ.

ಅಧ್ಯಕ್ಷರು :— ಇದು ಪ್ರಶ್ನೋತ್ತರ ದಯಮಾಡಿ ಎಲ್ಲಾ ಸದಸ್ಯರೂ ಸಹಕರಿಸಬೇಕು. ಇನ್ನೂ ಬಹಳ ಪ್ರಶ್ನೆಗಳು ಇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ :— ಮಾನ್ಯ ಮುಖ್ಯಮಂತ್ರಿಗಳು ಹಣ ಬಿಡುಗಡೆ ಮಾಡತ್ತಾರೆಯೇ ಎಂಬುದನ್ನು ಹೇಳಿದರೆ, ನಾವು ಸುಮ್ಮನೆ ಕುಳಿತುಕೊಳ್ಳುತ್ತೇವೆ.

ಅಧ್ಯಕ್ಷರು :— ನಾನು ಮಾನ್ಯ ಶಿವಪ್ಪನವರಲ್ಲಿ, ಮಾನ್ಯ ಸಭಾಪತಿಯವರಲ್ಲಿ ಹಾಗೂ ಎಲ್ಲರಲ್ಲೂ ವಿನಂತಿ ಮಾಡಿಕೊಳ್ಳುತ್ತೇನೆ. ಇದು ಬಹಳ ಮುಖ್ಯವಾದಂಥ ವಿಚಾರ. ಎಲ್ಲರೂ ಎದ್ದು ನಿಂತರೆ, ಅವಕಾಶ ಕೊಡುವುದಕ್ಕೆ ಆಗುವುದಿಲ್ಲ. ನಾವು ಪ್ರಶ್ನೋತ್ತರದಲ್ಲಿದ್ದೇವೆ. ಮುಂದಿನ ಪ್ರಶ್ನೆಗೆ ಹೋಗಬೇಕು.

ಶ್ರೀ ಬಿ.ಬಿ. ಶಿವಪ್ಪ :— ಮಲೆನಾಡು ಅಭಿವೃದ್ಧಿ ಮಂಡಳಿ, ಮಲೆನಾಡು ಅಭಿವೃದ್ಧಿಗೋಸ್ಕರ ಇರತಕ್ಕಂಥ ಒಂದು ಸಂಸ್ಥೆ. ಆದರೆ, ಇವರು ಸಾಲ ಕೊಡಬಹುದೇ? ಅಭಿವೃದ್ಧಿ ಮಂಡಳಿಯ ಹಣ ಲಕ್ಷಾಂತರ ರೂಪಾಯಿಗಳನ್ನು ಸಾಲವಾಗಿ ಕೊಡಬಹುದೇ?

ಶ್ರೀ ಕೆ. ವೆಂಕಟೇಶ್ :— ಮಾನ್ಯ ಸದಸ್ಯರುಗಳ ಒತ್ತಾಯ ಏನೆಂದರೆ ಈ ವರ್ಷ ಹಣ ಬಿಡುಗಡೆಯಾಗಬೇಕು. ಈ ವರ್ಷ ನಮಗೆ ಬಜೆಟ್ ಅಲೋಕೇಷನ್ ಇರುವುದು 34 ಕೋಟಿ ರೂಪಾಯಿಗಳು. ಅದರಲ್ಲಿ 4 ಕೋಟಿ ರೂಪಾಯಿ ನಬಾರ್ಡ್‌ಗೆ ಮೀಸಲಾಗಿಟ್ಟಿದ್ದೇವೆ. ಇನ್ನು 9 ಕೋಟಿ ರೂಪಾಯಿಗಳು ಎಸ್‌ಸಿಪಿ ಮತ್ತು ಟಿಎಸ್‌ಪಿಗೆ ಹೋಗುತ್ತದೆ. ಇನ್ನು 21 ಕೋಟಿ ರೂಪಾಯಿಗಳಿಗೆ ನಾವು ಹೊಸ ಕಾಮಗಾರಿಗಳಿಗೆ ಆಕ್ಷನ್ ಪ್ಲಾನ್ ಮಾಡಿದ್ದೇವೆ. 21 ಕೋಟಿ ರೂಪಾಯಿಗಳಲ್ಲಿ ಈಗಾಗಲೇ ಹನ್ನೆರಡೂವರೆ ಕೋಟಿ ರೂಪಾಯಿಗಳನ್ನು ಸರ್ಕಾರ ಬಿಡುಗಡೆ ಮಾಡಿದೆ. ಇನ್ನು 9 ಕೋಟಿ ರೂಪಾಯಿಗಳನ್ನು ಈ ವರ್ಷ ಬಿಡುಗಡೆ ಮಾಡಬೇಕು. ಮಾನ್ಯ ಸದಸ್ಯರ ಒತ್ತಾಯ ಏನೆಂದರೆ ಹೊಸ ಕಾಮಗಾರಿಗಳು ನಡೆಯುತ್ತಿವೆ ಹಣ ಬಿಡುಗಡೆ ಮಾಡಬೇಕು.

ಶ್ರೀ ಕಾಗೋಡು ತಿಮ್ಮಪ್ಪ :— ಹಣ ಯಾವಾಗ ಬಿಡುಗಡೆ ಮಾಡುತ್ತೀರಿ ಎಂಬುದನ್ನು ಹೇಳಿ. ಮುಂದಿನ ವರ್ಷದ 9 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೇವೆಂದು ತಾವೇ ಹೇಳಿದ್ದೀರಿ.

ಶ್ರೀ ಜೆ.ಹೆಚ್ ಪಟೇಲ್ :— ಮಾನ್ಯ ಅಧ್ಯಕ್ಷರೇ, ಬಜೆಟರಿ ಪ್ರಾವಿಷನ್ ಆಗಿದ್ದನ್ನು ಬಿಡುಗಡೆ ಮಾಡದೇ ಇರುವುದಕ್ಕೆ ಆಗುತ್ತದೆಯೇ? You have also run the Government. ಈಗಾಗಲೇ ನಾವು ಈ ವರ್ಷದ ಕೊನೆಯಲ್ಲಿದ್ದೇವೆ. ಯಾವುದನ್ನು ಬಿಡುಗಡೆ ಮಾಡಬೇಕಾಗಿದೆಯೋ ಅದನ್ನು ಬಿಡುಗಡೆ ಮಾಡುತ್ತೇವೆ.

ಶ್ರೀ ಕೆ.ಎಸ್. ಈಶ್ವರಪ್ಪ :— ಯಾವಾಗ ಬಿಡುಗಡೆ ಮಾಡುತ್ತೀರಿ ಎನ್ನುವುದನ್ನು ಹೇಳಿ.

ಶ್ರೀ ಜಿ.ಹೆಚ್. ಪಟೇಲ್:— ಈ ವರ್ಷದ ಬಜೆಟರಿ ಪ್ರಾವಿಜನ್ ಏನು ಮಾಡಿದ್ದೇವೆ ಅದನ್ನು ಬಿಡುಗಡೆ ಮಾಡಲೇಬೇಕು.

ಶ್ರೀ ಕೆ.ಎಸ್. ಈಶ್ವರಪ್ಪ:— ಮಾನ್ಯ ಅಧ್ಯಕ್ಷರೇ, 73 ವಿಧಾನ ಸಭಾ ಕ್ಷೇತ್ರದಲ್ಲಿ ನಾವು ಮುಖ ತೋರಿಸುವಂತಹ ಸ್ಥಿತಿಯಲ್ಲಿ ಇಲ್ಲ. ಈ ಸರ್ಕಾರ ರಾಜ್ಯದ ಜನತೆಗೆ ದ್ರೋಹ ಮಾಡಿದ್ದಾರೆ. ರಾಜ್ಯದ ಜನತೆಯ ಬಗ್ಗೆ ಇವರು ಇಷ್ಟು ತಾತ್ಸಾರವಾಗಿ ಮಾತನಾಡುತ್ತಿರುವುದನ್ನು ಪ್ರತಿಭಟನೆ ಮಾಡಿ ನಾವು ಸಭಾತ್ಯಾಗ ಮಾಡುತ್ತೇವೆ.

(ಬಿಜೆಪಿ ಮಾನ್ಯ ಸದಸ್ಯರುಗಳು ಸಭಾತ್ಯಾಗ ಮಾಡಿದರು)

ಕಾವೇರಿ ಏತ ನೀರಾವರಿ ನಿಗಮದಿಂದ ಮಹಿಸಿಕೊಂಡಿರುವ ಕಾಮಗಾರಿಗಳು ವಿಳಂಬವಾಗುತ್ತಿರುವುದು.

8(333) ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು):— ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕಾವೇರಿ ಏತ ನೀರಾವರಿ ನಿಗಮದಿಂದ ಮಹಿಸಿಕೊಂಡಿರುವ ಕಾಮಗಾರಿಗಳ ಸಂಖ್ಯೆ ಎಷ್ಟು;

ಆ) ಅವು ಯಾವ ಹಂತದಲ್ಲಿವೆ;

ಇ) ಕಾಮಗಾರಿಗಳು ವಿಳಂಬವಾಗಲು ಕಾರಣಗಳೇನು?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು):—

ಅ) ಒಟ್ಟು 18

ಆ) ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಇ) ವಿಳಂಬಕ್ಕೆ ಕಾರಣಗಳು

ಅ) ಸಣ್ಣ ನೀರಾವರಿ ಇಲಾಖೆಯ ಕಛೇರಿ ಮತ್ತು ಸಿಬ್ಬಂದಿಯ ಆಡಳಿತ ವಿವಿಧ ಇಲಾಖೆಗಳಲ್ಲಿ ಹಂಚಿದ್ದು, ಈಗತಾನೆ ಇಲಾಖೆ ಪ್ರತ್ಯೇಕ ಗೊಂಡಿರುವುದು ವಿಳಂಬವಾಗಿರುವುದಕ್ಕೆ ಮುಖ್ಯ ಕಾರಣ.

ಬ) ಯೋಜನೆಗೆ ಬೇಕಾದ ಹಣವನ್ನು ಆಯವ್ಯಯದಲ್ಲಿ ಒದಗಿಸಿರುವುದರಿಂದ

ಇ) ಅಂದಾಜು ಪಟ್ಟಿ ತಯಾರಿಸಲಾಗಿದೆ. ನೀರಿನ ಲಭ್ಯತೆ, ಗುತ್ತಿಗೆ ಕರಾರಿನ ತೊಡಕುಗಳು, ಭೂಸ್ವಾಧೀನ, ತಾಂತ್ರಿಕ ಸಮಿತಿಯ ಶಿಫಾರಸ್ಸು, ಕೆ.ಇ.ಜಿ.ಯಿಂದ ವಿದ್ಯುಚ್ಛಕ್ತಿ ಸರಬರಾಜು ಇತ್ಯಾದಿಗಳನ್ನು ಪಡೆಯುವಲ್ಲಿ ವಿಳಂಬ.